ಉ) ವಿಷಯ ತೀರ್ಥಹಳ್ಳಿಯಲ್ಲಿ ನಡೆದ ದರೋಡೆ ಪ್ರಕರಣದ ಬಗ್ಗೆ ಪ್ರಸ್ತಾಪ ಮತ್ತು ಉತ್ತರ ಹಾಗೂ ಗೋವಾ ಕನ್ನಡಿಗರ ಸಮಸ್ಯೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ನಡೆದಂತಹ ಒಂದು ದರೋಡೆ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ನಾನು ನಿನ್ನೆ ಒಂದು ನೋಟೀಸ್ ಅನ್ನು ತಮಗೆ ಕಳುಹಿಸಿದ್ದೆ ಅದರ ಬಗ್ಗೆ ನನಗೆ ಪ್ರಸ್ತಾಪಿಸಲು ಇವತ್ತು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದಗಳು ಆ ದರೋಡೆ ಪ್ರಕರಣ ಮೊನ್ನೆ ನಡೆದಿತ್ತು ನಿನ್ನೆ ಸಂಜೆಯೊಳಗಾಗಿ ಶಿವಮೊಗ್ಗ ಪೊಲೀಸರು ಆ ದರೋಡೆಕೋರರನ್ನು ಹಿಡಿದಿದ್ದಾರೆ ಈ ಸದನದ ಮೂಲಕ ಶಿವಮೊಗ್ಗ ಪೊಲೀಸರಿಗೆ ಅಭಿನಂದನೆ ಸಲ್ಲಿಸಿ ನಾನು ಕುಳಿತುಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಸರ್ಕಾರ ಎಷ್ಟು ಪ್ರಾಮಾಣಿಕವಾಗಿ ಕ್ಷಿಪ್ರ ಗತಿಯಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ತಾವು ಒಪ್ಪಿಕೊಂಡಿರುವುದಕ್ಕಾಗಿ ತಮಗೆ ಅಭಿನಂದನೆಗಳು

ಶ್ರೀ ಆರಗ ಜ್ಞಾನೇಂದ್ರ ನಿಮ್ಮ ಸರ್ಕಾರದಲ್ಲೂ ಒಳ್ಳೆಯ ಅಧಿಕಾರಿಗಳಿದ್ದಾರೆ ಎಂಬುದೇ ಸಂತೋಷದ ವಿಷಯವಾಗಿದೆ

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೇ, ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಈ ರಾಜ್ಯದ ಅನೇಕ ರೈತರ ಮೇಲೆ ..

ಅಧ್ಯಕ್ಷರು ದಯವಿಟ್ಟು ತಾವು ಕುಳಿತುಕೊಳ್ಳಬೇಕು

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಹೊಸ ಸದಸ್ಯರಿಗೆ ಅವಕಾಶವನ್ನು ಮಾಡಿ ಕೊಡಬೇಕು ..

ಅಧ್ಯಕ್ಷರು ತಾವು ದಯಮಾಡಿ ಕುಳಿತುಕೊಳ್ಳಬೇಕು ಮಾನ್ಯ ಆರಗ ಜ್ಞಾನೇಂದ್ರರವರು ಪ್ರಸ್ತಾಪ ಮಾಡಿದ್ದಕ್ಕೆ ಸರ್ಕಾರದ ಕಡೆಯಿಂದ ಯಾರು ಉತ್ತರ ಕೊಡುತ್ತೀರಿ?

ಶ್ರೀ ಆರಗ ಜ್ಞಾನೇಂದ್ರ ನಾನು ಪ್ರಸ್ತಾಪಿಸಿದ ಪ್ರಕರಣದ ಬಗ್ಗೆ ಮಾನ್ಯ ಗೃಹ ಸಚಿವರು ವಿವರವಾದ ಹೇಳಿಕೆ ಕೊಟ್ಟರೆ ಅನುಕೂಲವಾಗುತ್ತದೆ ನಮ್ಮ ಮಲೆನಾಡಿನಂತಹ ತಾಲ್ಲೂಕಿನಲ್ಲಿ ಒಂದೊಂದೇ ಮನೆಗಳು ಇರುತ್ತವೆ ದರೋಡೆ ಪ್ರಕರಣಗಳು ಜಾಸ್ತಿಯಾದರೆ ಕಷ್ಟವಾಗುತ್ತದೆ ಈ ಪ್ರಕರಣದಲ್ಲಿ ಅಪರಾಧಿಗಳನ್ನು ಪೊಲೀಸ್‌ನವರು ಹಿಡಿದಿದ್ದಾರೆ ಇನ್ನು ಮುಂದಾದರೂ ಇಂತಹ ಪ್ರಕರಣಗಳು ಜರುಗದಂತೆ ಸ್ವಲ್ಪ ಬಿಗಿ ಮಾಡುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕು ನನ್ನ ಕ್ಷೇತ್ರದಲ್ಲಿ ನಕ್ಸಲೈಟ್ ಹಾವಳಿ ಸಹ ಇದೆ ಅಲ್ಲಿಯ ಪೊಲೀಸರಿಗೆ ಇನ್ನಷ್ಟು ಹೆಚ್ಚು force ಕೊಡುವಂತಹ ಅಗತ್ಯ ಇದೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಆ ಮನೆಯಲ್ಲಿ ವಿಧಾನ ಪರಿಷತ್ತಿಗೆ ಹೊಸದಾಗಿ ಚುನಾಯಿತರಾದಂತಹ ಸದಸ್ಯರ ಪ್ರಮಾಣ ವಚನ ಸ್ವೀಕಾರ ನಡೆಯುತ್ತಿದ್ದುದ್ದರಿಂದ ನಾನು ಅಲ್ಲಿದ್ದೆ ನಾನು ಅಲ್ಲಿಂದ ಈ ಮನೆಗೆ ಬರುವುದಕ್ಕೆ ಮುಂಚೆ ಮಾನ್ಯ ವಾಟಾಳ್ ನಾಗರಾಜ್‌ರವರು ಗೋವಾ ಕನ್ನಡಿಗರ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಕರ್ನಾಟಕದ ಜನರು ಗೋವಾದಲ್ಲಿದ್ದಾರೆ ಹಾಗೂ ಬಾಂಬೆನಲ್ಲಿಯೂ ಸಹ ಇದ್ದಾರೆ ಎಲ್ಲಾ ಪ್ರದೇಶಗಳಲ್ಲಿ ಇರತಕ್ಕಂಥ ಕನ್ನಡಿಗರ ಹಿತರಕ್ಷಣೆ ಮಾಡತಕ್ಕದ್ದು ನಮ್ಮ ಸರ್ಕಾರದ ಕರ್ತವ್ಯ ಆಗಿದೆ. ಹಾಗೆಯೇ ಅಲ್ಲಿಯ ಸರ್ಕಾರಗಳೂ

ಕೂಡ ಆ ಕರ್ತವ್ಯವನ್ನು ಮಾಡುತ್ತಲೇ ಬಂದಿವೆ ಈ ದಿನದ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಅದರ ಬಗ್ಗೆ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ ಅಲ್ಲಿರುವ 813 ಕುಟುಂಬಗಳಲ್ಲಿ 650 ಕುಟುಂಬಗಳು ಕನ್ನಡಿಗರದು 'ಬಯನಾ' ಪ್ರದೇಶದಲ್ಲಿ 'ಕೆಂಪು ದೀಪ'ದ ಪ್ರದೇಶವಿದ್ದು ಅಲ್ಲಿ ಮನೆಗಳನ್ನು ನೆಲಸಮ ಮಾಡಿದ್ದಾರೆ ಇತ್ಯಾದಿ ವಿವರಗಳನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಈಗಾಗಲೇ ನಾನು ಸರ್ಕಾರದ ಅಧಿಕಾರಿಗಳ ಜೊತೆಗೆ ಈ ಬಗ್ಗೆ ಮಾತನಾಡಿದ್ದೇನೆ ರಾಜ್ಯದ ಮುಖ್ಯ ಕಾರ್ಯದರ್ಶಿಯವರೂ ಕೂಡ ಅಲ್ಲಿನ ಮುಖ್ಯ ಕಾರ್ಯದರ್ಶಿಯವರನ್ನು ಸಂಪರ್ಕಿಸಿ, ಈ ರೀತಿಯ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದ್ದೇನೆ ಅಲ್ಲಿಗೆ ಕೆಲವು ಅಧಿಕಾರಿಗಳನ್ನೂ ಕೂಡ ಖುದ್ದಾಗಿ ಕಳುಹಿಸಿ, ಅದರ ವ್ಯವಸ್ಥೆಯನ್ನು ಮಾಡತಕ್ಕಂಥ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಮಾನ್ಯ ವಾಟಾಳ್ ನಾಗರಾಜ್‌ರವರು ಏನೂ ಭಯ ಪಡಬೇಕಾಗಿಲ್ಲ ಕನ್ನಡಿಗರ ಬಗ್ಗೆ ತಮ್ಮ ಏನೊಂದು ಭಾವನೆ ಇದೆಯೋ, ಅದರ ಬಗ್ಗೆ ನಮ್ಮದೂ ಕೂಡ ಅಷ್ಟೇ ಸಹಾನುಭೂತಿ ಇದೆ ಅದರ ಬಗ್ಗೆ ಎಲ್ಲಾ ತರಹದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಮಾನ್ಯ ಆರಗ ಜ್ಞಾನೇಂದ್ರರವರು ತಮ್ಮ ಮತ ಕ್ಷೇತ್ರದಲ್ಲಿ ದರೋಡೆಗಳಾಗುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ನಾನು ಡಿ ಜಿ ಯವರಿಗೆ strict instruction ಕೊಟ್ಟು, ಎಲ್ಲಾ ಕಡೆಗೂ ದರೋಡೆ ಆಗುವುದನ್ನು ನಿಲ್ಲಿಸಬೇಕು ಮತ್ತು ಅದು ಆಗದಂತೆ ನೋಡಿಕೊಳ್ಳಬೇಕೆಂದು ಸೂಚಿಸುತ್ತೇನೆ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ Law and Order ಬಹಳ ಚೆನ್ನಾಗಿದೆ ಅನ್ನತಕ್ಕಂಥ ಅಭಿಪ್ರಾಯವನ್ನು ಮೂಡಿಸತಕ್ಕಂಥ ರೀತಿಯಲ್ಲಿ ಬಹಳ ಜಾಗ್ರತೆಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ಸ್ಪಷ್ಟವಾದ ಆದೇಶ ಸರ್ಕಾರದ ಕಡೆಯಿಂದ ಸಂಬಂಧಪಟ್ಟವರಿಗೆ ಹೋಗುತ್ತದೆ

ಊ) ವಿಷಯ ವಿರಾಜಪೇಟೆ ತಾಲ್ಲೂಕಿನಿಂದ ಕೇರಳಕ್ಕೆ ಮರುಳು ಸಾಗಣೆಯಾಗುತ್ತಿರುವ ಬಗ್ಗೆ

ಶ್ರೀ ಹೆಚ್ ಡಿ ಬಸವರಾಜ್ (ವಿರಾಜಪೇಟೆ) ಮಾನ್ಯ ಅಧ್ಯಕ್ಷರೇ, ಕರ್ನಾಟಕ–ಕೇರಳ ಗಡಿ ಪ್ರದೇಶದಲ್ಲಿ ವಿರಾಜಪೇಟೆ ತಾಲ್ಲೂಕು ಇರುವುದು ತಮಗೂ ಕೂಡ ಗೊತ್ತಿದೆ. ಇತ್ತೀಚಿನ ದಿವಸಗಳಲ್ಲಿ ವಿರಾಜಪೇಟೆ ತಾಲ್ಲೂಕಿನಲ್ಲಿ ಇರತಕ್ಕಂಥ ತೋಡುಗಳು ಮತ್ತು ಕಾಲುವೆ, ಹೊಳೆ ಬದಿ, ಇವುಗಳಲ್ಲಿನ ಮರಳನ್ನು ತೆಗೆದು ಸಾಗಣೆ ಮಾಡತಕ್ಕಂಥ ಒಂದು ಪ್ರವೃತ್ತಿ ಜಾಸ್ತಿಯಾಗುತ್ತಿದೆ ಇದರಿಂದಾಗಿ ಅಲ್ಲಿನ ಸ್ಥಳೀಯರಿಗೆ ಮನೆ ಕಟ್ಟಲಿಕ್ಕೆ ಅಥವಾ ಮರಳನ್ನು ಇತರ ಯಾವ ಕೆಲಸಗಳಿಗೆ ಅವರು ಉಪಯೋಗಿಸಿಕೊಳ್ಳುತ್ತಿದ್ದರೋ ಅದಕ್ಕೆ ಮರಳಿನ ಕೊರತೆ ಉಂಟಾಗಿ ಅದನ್ನು ಬಳಸಿಕೊಳ್ಳುವ ಅವಕಾಶ ಸಿಕ್ಕಾಪಟ್ಟೆ ಕಡಿಮೆಯಾಗುತ್ತಿದೆ ಈ ರೀತಿ ತೆಗೆದ ಮರಳನ್ನು ಕೇರಳ ರಾಜ್ಯಕ್ಕೆ ರಾಜಾರೋಷವಾಗಿ ಸಾಗಣೆ ಮಾಡುತ್ತಿದ್ದಾರೆ, ದಿನನಿತ್ಯ ನೂರಾರು ಲಾರಿಗಳು ವಿರಾಜಪೇಟೆ ತಾಲ್ಲೂಕಿನಿಂದ ಕೇರಳ ರಾಜ್ಯಕ್ಕೆ ಹೋಗುತ್ತಿವೆ ಇದಕ್ಕೆ ತಡೆಯುವುದಕ್ಕೆ ಹೋದಂತಹ ಸಮಾಜದ ಕೆಲವು ಬಂಧುಗಳು ಅಹಿತಕರ ಘಟನೆಗೆ ಒಳಗಾಗಬೇಕಾದಂತಹ ಸಂದರ್ಭ ಬಂದಾಗ, ನಾನು ಶಾಂತಿಯುತವಾಗಿ ಈ ಬಗ್ಗೆ ಪ್ರತಿಭಟನೆ ಮಾಡಿದರೂ ಸಹ ಈ ಒಂದು ಸಾಗಾಣಿಕೆ ನಿಲ್ಲುತ್ತಿಲ್ಲ ಮಾನ್ಯ ಅಧ್ಯಕ್ಷರ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದೇನೆಂದರೆ, ಈ ಒಂದು ದಂಧೆಯಿಂದಾಗಿ ಇತ್ತೀಚಿನ ದಿವಸಗಳಲ್ಲಿ ಪ್ರಾಮಾಣಿಕವಾಗಿರುವಂತಹ ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಬಿ.ಜೆ.ಪಿ ಕಾರ್ಯಕರ್ತರಾಗಿದ್ದವರು ಗುಂಡೇಟಿಗೆ ಬಲಿಯಾದರು ಅದೂ ಕೂಡ ಗಂಭೀರವಾದಂತಹ ವಿಚಾರವಾಗಿದೆ